**OS: 231-17** **DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 04.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ G K D, ವಕೀಲರಿಂದ ಃ**

ಈ ದಾವೆಯನ್ನು ಯಾರು ಯಾರ ವಿರುದ್ಧ ಸಲ್ಲಿಸಿದ್ದಾರೆ ಅಂದರೆ ನನಗೆ ಗೊತ್ತು. ಈ ದಾವೆಯನ್ನು ನನ್ನ ಅಕ್ಕ ಚಂಪಾವತಿ ಸಲ್ಲಿಸಿರುತ್ತಾಳೆ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಅಂದರೆ ಸರಿ. ನನ್ನ ತಾಯಿ ಮೊದಲನೇ ಹೆಂಡತಿ. ನನ್ನ ತಾಯಿ ಮೊದಲನೇ ಹೆಂಡತಿ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ತಂದೆಗೆ ಪುಟ್ಟಮ್ಮ ಚಂಪಾವತಿ ತಾಯಿ ಮೊದಲನೇ ಹೆಂಡತಿ ಅಂದರೆ ಸರಿಯಲ್ಲ. ಪುಟ್ಟಮ್ಮ ಮರಣ ಹೊಂದಿದ ನಂತರ ನಮ್ಮ ತಂದೆ ನಮ್ಮ ತಾಯಿಯನ್ನು ಮದುವೆಯಾಗಿದೆ ಅಂದರೆ ಸರಿಯಲ್ಲ. ನನ್ನ ತಾಯಿ ಮೊದಲನೇ ಹೆಂಡತಿ ಎಂದು ತೋರಿಸಲು ದಾಖಲೆ ಹಾಜರಪಡಿಸಿರುತ್ತೇನೆ. ನನ್ನ ತಂದೆಗೆ 4 ಜನ ಗಂಡು ಮಕ್ಕಳು ಮತ್ತು 7 ಜನ ಹೆಣ್ಣು ಮಕ್ಕಳು. ವಾದಿ ಚಂಪಾವತಿ ಹಿಡಿದುಕೊಂಡು 7 ಜನ ಹೆಣ್ಣು ಮಕ್ಕಳು. ನಮ್ಮ ತಂದೆ ದಿಃ 24.4.1984 ರಲ್ಲಿ ಮರಣ ಹೊಂದಿರುತ್ತಾರೆ. ನಮ್ಮ ತಂದೆ ಹೆಸರಿನಲ್ಲಿ 17 ಎಕರೆ 10 ಗುಂಟೆ ಜಮೀನು ಇತ್ತು ಅಂದರೆ ಸರಿ. ಆ ನಂತರ 9 ಎಕರೆ 10 ಗುಂಟೆ ಅವರ ಹೆಸರಿನಲ್ಲಿತ್ತು. ಸ ನಂಃ 79 ಇರುತ್ತದೆ. ನಮ್ಮ ತಂದೆ ಮರಣ ಹೊಂದಿದ ನಂತರ ಎಲ್ಲಾ ಮಕ್ಕಳು ವಾರಸಾ ಹಕ್ಕುದಾರರು ಅಂದರೆ ಸರಿ. ಸಾಕ್ಷಿ ಮುಂದುವರೆದು ನುಡಿಯುತ್ತಾರೆ, ನಮ್ಮ ತಂದೆ ವಿಲ್ ಬರೆದಿರುತ್ತಾರೆ. ನಿಪಿ.1 ರಲ್ಲಿ ಬಸಪ್ಪ ಮರಣ ಹೊಂದಿದ ನಂತರ ಎಲ್ಲಾ ಮಕ್ಕಳು ದಾವಾ ಆಸ್ತಿ ಪಹಣಿಯಲ್ಲಿ ಹೆಸರು ಬಂದಿದೆ ಅಂದರೆ ಸರಿ. ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ವಾದಿ ಹೆಸರು ತೆಗೆಸಿರುತ್ತೇವೆ ಅಂದರೆ ಸರಿಯಲ್ಲ. ವಾದಿ ಹೆಸರು ದಾಖಲು ಆಗದೇ ಹಾಗೆ ನೋಡಿಕೊಂಡಿರುತ್ತೇವೆ ಅಂದರೆ ಸರಿಯಲ್ಲ. ನಿಪಿ.2 ರಲ್ಲಿ ವಾದಿಯ ಬೆನ್ನು ಹಿಂದೆ ತಿಳಿಯದಂತೆ ಖೊಟ್ಟಿ ಪಾಲು ಮಾಡಿಕೊಂಡಿರುತ್ತೇವೆ ಅಂದರೆ ಸರಿಯಲ್ಲ. ನಿಪಿ.2 ಆಧಾರ ರಹಿತ ಅಂದರೆ ಸರಿಯಲ್ಲ. ನಿಪಿ.2 ರಂತೆ ಪಾಲು ವಿಭಾಗ ಪಡೆದುಕೊಳ್ಳಲು ವಾದಿ ಸಮ್ಮತಿ ಪಡೆದಿಲ್ಲ, ಏಕೆಂದರೆ ಸಂಬಂಧ ಇಲ್ಲ.

**OS: 231-17** **DW-1**

**ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.